ಆಗುವುದಿಲ್ಲವೇ?' ಎಂದು ಅಸಹಾಯಕನಾಗಿ ಕೇಳುತ್ತಾನೆ ವಲಸಿಗ. ಅಲ್ಲಿಗೆ ವಿಡಿಯೊ ಕೊನೆಗೊಳ್ಳುತ್ತದೆ. ಆದರೆ ಅಷ್ಟರಲ್ಲಾಗಲೇ ವಲಸಿಗನ ಆ ಹೇಳಿಕೆಯೂ ಸಹ ವಿಡಿಯೊ ಕಲೆಯ ಭಾಗವಾಗಿ, ವಿಡಿಯೊ ಕಲೆಯಾಗಿಯೂ ಮಾರ್ಪಾಡು ಆಗಿರುತ್ತದೆ! ರಿಚರ್ಡ್ ಬ್ಯಾಕ್ ಕಾದಂಬರಿ ಒಂದರಲ್ಲಿ ಇದೇ ಸ್ವಾತಂತ್ರ್ಯದ ಪ್ರಶ್ನೆ ಬಂದಾಗ, 'ನಿನ್ನ ರಕ್ತದ ಒಂದು ಪೈಂಟ್ ಕೊಡು, ಅದು ನನ್ನ ಹಕ್ಕು' ಎಂದು ಮನುಷ್ಯತ್ವದ ಬಗ್ಗೆ ಮಾತನಾಡುವ ಮನುಷ್ಯನೊಬ್ಬನನ್ನು ಕೇಳುತ್ತದೆ ಒಂದು ಡ್ರಾಕುಲಾ.

ವ್ಯಕ್ತಿಗತ ಮತ್ತು ಸಾರ್ವತ್ರಿಕ ಸ್ವಾತಂತ್ರ್ಯಗಳ ಪರಸ್ಪರ ಭಿನ್ನತೆಗಳ ಇಂತಹ ಹಿನ್ನೆಲೆಯ ಸಂದರ್ಭದಲ್ಲಿ ಹೀಗೆ ಕಲಾರಂಗದ ಪ್ರವೇಶದ ನಂತರ ನನ್ನ ಕಲ್ಪನೆಯ ಸ್ವಾತಂತ್ರ್ಯ ತುಂಬಾ ಸಹಜವಾದುದಾಗಿದೆ:

1. ಮತ್ತೊಬ್ಬರ ಸ್ವಾತಂತ್ರ್ಯಕ್ಕೆ ಧಕ್ಕೆ ತರದಿರುವುದು,

2. ಹಾಗೆ ಮಾಡುವಾಗ ಎರಡೆರಡು ಬಗೆಯ ಸ್ವಾತಂತ್ರ್ಯದ ಪರಿಕಲ್ಪನೆಗಳು ಒಟ್ಟಿಗೆ ಇರಲು ಸಾಧ್ಯವೇ ಎಂದು ಪರಿಶೀಲಿಸುವುದು; ಮತ್ತು

3. ಸ್ವಾತಂತ್ರ್ಯದ ನಿರಂತರ ರೂಪಾಂತರದ ಬಗ್ಗೆ ಅರಿವಿರುವುದು.

4. ವೈಯಕ್ತಿಕವಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಒತ್ತಾಯವೂ ಸಹ ಸಾರ್ವತ್ರಿಕ ಸ್ವಾತಂತ್ರ್ಯದ ಅಮೂರ್ತ ನೆಲೆಯಿಂದಲೇ ಒತ್ತರಿಸುತ್ತದೆ ಎಂಬ ಐತಿಹಾಸಿಕ ಅರಿವು.

ಹೊಸದಾಗಿ ಹುಟ್ಟಿದ ಯಾವುದೇ ದೇಶವಾಗಲಿ ಒಂದು ನಿಶ್ಚಿತ ರೂಪ ಪಡೆಯಲು ನೂರು ವರ್ಷ ಬೇಕಂತೆ. ನಮ್ಮ ದೇಶಕ್ಕೆ ಇನ್ನೂ ಎರಡೂವರೆ ದಶಕ ಬೇಕಿದೆ. ಸಾಧಾರಣವಾಗಿ ಪ್ರಜಾಪ್ರಭುತ್ವದ ನಿರ್ಮಿತಿಯ ಬಿಲಗಳಲ್ಲಿ ಅಡಗಿಕೊಳ್ಳುವ ಸೃಜನಶೀಲರು, ಹಾಗೆ ಮಾಡಲು ಅವಕಾಶವನ್ನು ಅನುವು ಮಾಡಿಕೊಡುವುದೂ ಸಹ ಇದೇ ಪ್ರಜಾಪ್ರಭುತ್ವವೇ ಅಲ್ಲವೇ ಎಂಬ ಸಂದಿಗ್ಧತೆಯನ್ನು ಯಾವಾಗಲೂ ಅನುಭವಿಸುತ್ತಾರೆ. ನನ್ನ ಕಲಾಕೃತಿ ಮತ್ತು ಬರವಣಿಗೆಯ ಕುಂಚ ಮತ್ತು ಲೇಖನಿಯನ್ನು ನಿಯಂತ್ರಿಸುತ್ತಿರುವುದೂ ಇದೇ ಸಂದಿಗ್ಧತೆಯೇ ಆಗಿರುವ ಸಾಧ್ಯತೆ ಇದೆ.

***

ಈ ಹಿನ್ನೆಲೆಯಲ್ಲಿ ನನಗೆ ಯಥಾನುವಾದ (ಇರುವುದನ್ನು ಇದ್ದಂತೆ ಸ್ವೀಕರಿಸುವ) ಮತ್ತು ಸದಾ ಬದಲಾವಣೆ ನಿರೀಕ್ಷಿಸುವ ಸಮಾಜವಾದಗಳ ಹಲವು ಬಿಳಲುಗಳ ನಡುವಣ ಸಂಘರ್ಷವೇ ಕ್ರಿಯಾಶೀಲ ಬದುಕಿಗೆ ಪ್ರೇರಣೆಯಾಗಿದೆ. ಈ ಮಾತು ಕಲಾವಿದ–ಗೆಳೆಯರನೇಕರಿಗೂ ಅನ್ವಯವಾಗುತ್ತದೆ. ಇಂತಹ ವ್ಯಕ್ತಿಗತ ವೇದಿಕೆಗಳನ್ನು ಸ್ಪಷ್ಟವಾಗಿ ರೂಪಿಸಿಕೊಂಡವರು ನಿಜವಾದ ಸ್ವತಂತ್ರರಂತೆ ಕಾಣುತ್ತಾರೆ. ಉದಾಹರಣೆಗೆ, ಎಡ–ಬಲ ಪಂಥಗಳ ನಡುವೆ ನನ್ನ ಕಲಾ ಗುಂಪು ಸ್ಪಷ್ಟವಾಗಿ ವಿಭಾಗಗೊಂಡಿದೆ. ಆದರೆ ಈ ವಿಭಾಗೀಕರಣದಲ್ಲೂ ನನಗೆ ಎರಡು ಮುಖ್ಯ ಸಾಧ್ಯತೆಗಳು ಕಾಣುತ್ತಿವೆ: ಒಂದು, ಒಂದೇ ರೀತಿಯ ಯೋಚನೆ, ಆದರ್ಶಗಳನ್ನು ಇರಿಸಿಕೊಂಡವರೂ ಸಹ ಪರಸ್ಪರ ವಿರುದ್ಧ ಪಕ್ಷಗಳಲ್ಲಿ ನೆಲೆ ನಿಂತಿರುವುದು ಬಹಳ ಕಾಣಬರುತ್ತದೆ. ಒಂದೇ ಪಕ್ಷಪಾತಿಗಳೂ ಸಹ ಪರಸ್ಪರ ವಿರುದ್ಧ ನಿಲುವುಗಳನ್ನು ಹೊಂದಿರುವವರಿದ್ದಾರೆ. ಅಂದರೆ ಪಕ್ಷಗಳ ಹಾಗೂ ಆದರ್ಶಗಳ ಚೌಕಟ್ಟುಗಳು ಪರಸ್ಪರ ಒಂದೇ ರೀತಿಯ ಹೊಂದಾಣಿಕೆಯನ್ನು ಹೊಂದಿಲ್ಲ ಎಂಬ ಅರಿವು ಈ ಕಲಾವಿದರುಗಳಿಗೆ ಸ್ಪಷ್ಟವಾಗಿಯೇ ಇದೆ. ಎರಡು: ಅದಾಗಲೇ ಕಲಾಭಿವ್ಯಕ್ತಿ ಎಂಬ ಸಾರ್ವತ್ರಿಕ ಪಕ್ಷದ ನಿಶ್ಚಿತ ಸದಸ್ಯರಾಗಿರುವ ಇವರೆಲ್ಲರೂ ನನಗೆ ಕಲಿಸಿಕೊಟ್ಟಿರುವ ಒಂದು ಗುರುತರವಾದ ಒಳನೋಟ ಇದು:

'ರಾಜಕೀಯದಲ್ಲಿ

